# ನಕ್ಕುಬಿಡಿ..!




ಹುಡುಗ ರಾತ್ರಿ ಹತ್ತಕ್ಕೆ ಹುಡುಗಿಗೆ ಅವತ್ತಿನ ಕೊನೆಯ ಮೆಸೇಜ್ ಮಾಡಿದ.
ಪ್ರಿಯೇ ನೀನು ಎಲ್ಲಿದ್ದೀಯಾ? ಹೇಗಿದ್ದೀಯಾ?
ನಿದ್ದೆಯಲ್ಲಿದ್ದರೆ ನಿನ್ನ ಸವಿಗನಸುಗಳನ್ನು ಕಳಿಸು; ಎಚ್ಚರವಾಗಿದ್ದರೆ ನಿನ್ನ ಸವಿನೆನಪುಗಳನ್ನು ಕಳಿಸು.
ದುಃಖದಲ್ಲಿದ್ದರೆ ನಿನ್ನ ಕಣ್ಣೀರನ್ನು ಕಳಿಸು; ಸಂತೋಷದಲ್ಲಿದ್ದರೆ ನಿನ್ನ ಮುಗುಳ್ನಗುವನ್ನು ಕಳಿಸು.
ಓದುತ್ತಿದ್ದರೆ ವಿದ್ಯೆಯನ್ನು ಕಳಿಸು; ಹಾಡುತ್ತಿದ್ದರೆ ಗೀತೆಯನ್ನು ಕಳಿಸು.
ಹುಡುಗಿ ಉತ್ತರಿಸಿದಳು–
ನಾನು ಟಾಯ್ಲೆಟ್‌ನಲ್ಲಿದ್ದೇನೆ!

★★★

ಕಂಪನಿಯೊಂದು ಪ್ರಚಾರ ಮಾಡಿತು, 'ಪುಕ್ಕಟೆ ಹೊಸ ಸಿಮ್. ತಿಂಗಳಿಗೆ ಹತ್ತೇ ರೂಪಾಯಿ ಬಾಡಿಗೆ, ದಿನಕ್ಕೆ ಸಾವಿರ ಎಸ್ಸೆಮ್ಮೆಸ್ ಫ್ರೀ, ನಿಮಿಷಕ್ಕೆ ಒಂದೇ ಪೈಸೆ ಎಲ್ಲಾ ಕಾಲ್‌ಗಳಿಗೆ, ಅಂತರರಾಷ್ಟ್ರೀಯ ಕಾಲ್‌ಗಳಿಗೆ ನಿಮಿಷಕ್ಕೆ ಎರಡು ಪೈಸೆ.



ಉಳಿದೆಲ್ಲಾ ಸೇವೆಗಳು ಉಚಿತ. ಆದರೆ ಒಂದೇ ಒಂದು ಕಂಡಿಷನ್'
ಲಕ್ಷಾಂತರ ಗ್ರಾಹಕರು 'ಏನದು ಕಂಡೀಷನ್' ಎಂದು ವಿಚಾರಿಸಲು ನುಗ್ಗಿದರು.
ಕಂಪೆನಿಯವರು ತಿಳಿಸಿದರು– 'ನಮ್ಮದು ಸರಳವಾದ ಕಂಡಿಷನ್. ನಿಮ್ಮ ನಿಮ್ಮ ಊರುಗಳಲ್ಲಿನ ಟವರ್‌ಅನ್ನು ನೀವೇ ಕಟ್ಟಿಕೊಳ್ಳಬೇಕು!'


★★★

ದೂರದ ಊರಿನಲ್ಲಿ ನೌಕರಿಯಲ್ಲಿದ್ದ ಗಂಡ ಹೆಂಡತಿಗೆ ಮೆಸೇಜ್ ಕಳಿಸಿದ.
ಕಣ್ಣು ನಿನಗಿರಲಿ; ಕಣ್ಣೀರು ನನಗಿರಲಿ.
ಹೂವು ನಿನಗಿರಲಿ; ಮುಳ್ಳು ನನಗಿರಲಿ.
ನಲಿವು ನಿನಗಿರಲಿ; ನೋವು ನನಗಿರಲಿ.
ಹೆಂಡತಿ ಒಂದೇ ಸಾಲಿನಲ್ಲಿ ಉತ್ತರಿಸಿದಳು;
ನೌಕರಿ ನಿನಗಿರಲಿ, ಸಂಬಳ ನನಗಿರಲಿ!

–ನಡಹಳ್ಳಿ ವಸಂತ್

---

ಸಿದ್ದು: ಏಕಯ್ಯಾ ಕೇಬಲ್ ಕನೆಕ್ಷನ್ ತೆಗೆದುಕೊಂಡಿಲ್ಲ.
ಪೆದ್ದು: ಮಕ್ಕಳು ಓದದೆ ಹಾಳಾಗ್ತಾರೆ ಅಂತ.
ಸಿದ್ದು: ಮಕ್ಕಳು ಎಲ್ಲಿದ್ದಾರೆ ಕಾಣಿಸುತ್ತಿಲ್ಲವಲ್ಲಾ?
ಪೆದ್ದು: ಪಕ್ಕದ್ಮನೇಲಿ ಟಿ.ವಿ. ನೋಡಲು ಹೋಗಿದ್ದಾರೆ.



★★★

ಗಂಡ: ಏನೇ, ನಾನು ಸಂಬಳ ತಂದ ದಿನ ಮಾತ್ರ ಪ್ರೀತಿ ತೋರಿಸ್ತೀಯ.. ಬೇರೆ ದಿನ ತೋರಿಸೋದಿಲ್ಲವಲ್ಲ?
ಹೆಂಡತಿ: ನಿಜ ಹೇಳ್ರಿ, ಓಟಿ ಪೇಮೆಂಟ್ ತಂದ ದಿನವೂ ಪ್ರೀತಿ ತೋರಿಸಿದ್ದೇನಲ್ಲ..

★★★

ಕಂಡಕ್ಟರ್: ಏನ್ ಈ ಬಸ್ಸು ತುಂಬಾ ಬರೀ ಭಿಕ್ಷುಕರೇ ಇದ್ದಾರಲ್ಲಾ.?
ಭಿಕ್ಷುಕ: ನೀವೇ ಹೇಳಿದ್ರಲ್ಲಾ ಸಾರ್.. ಚಿಲ್ಲರೆ ಇರುವವರು ಬಸ್ಸು ಹತ್ತಿ ಅಂತಾ.

–ಎಂ.ಎಸ್.ಧರ್ಮೇಂದ್ರ